ಸಾಕ್ಷಿಯನ್ನು ದಿಃ **09-07-2015** ರಂದು ಕರೆಯಿಸಿ ಪ್ರಮಾಣಮಾಡಿಸಲಾಯಿತು,

ಪಾಟೀಸವಾಲು ಶ್ರೀ ಸಿ ಜಿ ಎಸ್ ವಕೀಲರಿಂದ

ದಾವಾಸ್ವತ್ತಿನ ಸರ್ವೆ ನಂ 552 ಅದು ಮೊದಲು ಗೋಮಾಳ ಜಮೀನು. ಅದು ಒಟ್ಟು ವಿಸ್ತೀರ್ಣ 500 ರಿಂದ 600 ಇರಬಹುದು. ನನು ಈದವೇಯನ್ನು 4 ಎಕರೆಗೆ ಹಾಕಿದ್ದೇನೆ. ಅದಕ್ಕೆ ಚೆಕ್ಕು ಬಂದಿ ಪೂರ್ವಕ್ಕೆ 8 ಅಡಿ ರಸ್ತೆ ಮತ್ತು ಚಿಕ್ಕಉನ್ನಾಲನ ಜಮೀನು. ಪಶ್ಚಿಮಕ್ಕೆ ಕರಾಬು ಹಳ್ಳ ಮತ್ತು ಶೇಹ್ ಮೊಹಿಯುದ್ದೀನನ ಜಮೀನು. ಉತ್ತರಕ್ಕೆ ಕಾಲುವೆ ಮತ್ತು ಚಿಕ್ಕಕುನ್ನಾಲನ ಇಮ್ತಿಯಾಜ್ ಖಾನ್ ರವರಜಮೀನು. ದಕ್ಷಿಣಕ್ಕೆ ಒಂದು ಕಾಲುವೆ ಮತ್ತು ಹನುಮಯ್ಯರವರ ಜಮೀನು. ದಾವಾಸ್ವತ್ತಿಗೆ ಕಿಮ್ಮತ್ತು ಕಟ್ಟಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದಾವಾಸ್ವತ್ತನ್ನು ಸರ್ಕಾರದವರು ನಮ್ಮ ತಂದೆಯವರಿಗೆ ಕೊಟ್ಟು 50 ರಿಂದ 60 ವರ್ಷಗಳಾಗಿವೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಮ್ಮ ತಂದೆ ಮಂಜೂರಾದಾಗಿನಿಂದ ಸ್ವಾಧಿನದಲ್ಲಿ ಇದ್ದರು ಎಂಬ ಬಗ್ಗೆ ಸಾಗುವಳಿ ಪತ್ರ ಪಹಣಿ ಹಾಜರುಪಡಿಸಿದ್ದೇನೆ. ನನ್ನ ತಾತನ ಹೆಸರು ಕರೀಂ ಸಾಬ್. ನಿಪಿ.3ರ 9ನೇ ಕಲಂನಲ್ಲಿರುವ ಅಬ್ದುಲ್ ಕರೀಂ ಬಿನ್ ಇನಾಬ್ ಸಾಬ್ ನಮಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 11.3.2007ರಲ್ಲಿ ತೀರಿಕೊಂಡರು. ನನ್ನ ತಾತನ ಹೆಸರು ಕರೀಂ ಸಾಬ್. ನಿಪಿ.1ರಲ್ಲಿರುವ ಇಮಾಮ್ ಸಾಬ್ ನನ್ನ ಚಿಕ್ಕತಾತ. ನನ್ನ ಚಿಕ್ಕತಾತ ಮತ್ತು ದೊಡ್ಡತಾತ ಬೇರೆ ಬೇರೆ ವಾಸವಾಗಿದ್ದರು.

ನಮ್ಮ ತಂದೆ ಸತ್ತ ನಂತರ ನಾವು ಸುಪರ್ದಿನಲ್ಲಿ ಇದ್ದೆವು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ನಿಪಿ.5ರಲ್ಲಿ ನಮೂದಾಗಿರುವ ಮೋದಿಂ ಸಾಬ್ ಬಿನ್ ಅಬ್ದುಲ್ ಕರೀಂ ಸಾಬ್ ಮತ್ತು ಕಲಂದರ್ ಸಾಬ್ ಬಿನ್ ಅಬ್ದುಲ ಕರಿಂ ಸಾಬ್‌ರವರು ದಾವಾಸ್ವತ್ತುಗಳಲ್ಲಿ ಬಹಳ ವರ್ಷಗಳಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಖಾತೆ ಪಹಣಿ ಇರುವುದನ್ನು ಪ್ರಶ್ನಿಸಿ ಎಸಿ ರವರ ನ್ಯಾಯಾಲಯದಲ್ಲಿ ಕೇಸು ಹಾಕಿದ್ದೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದಾವಾಸ್ವತ್ತುನ್ನು ಸರ್ಕಾರದಿಂದ ನಮ್ಮ ತಂದೆಗೆ ಯಾವತ್ತೂ ಮಂಜೂರಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಕರೀಂ ಸಾಬ್‌ರವರ ಸಂಬಂದಿ ಎಂದರೆ ಸಾಕ್ಷಿ ಅವರ ಮಕ್ಕಳು ಎಂದು ನುಡಿಯುತ್ತಾರೆ. ಇಮಾಮ್‌ಸಾಬ್‌ರವರು

ಪ್ರತಿವಾದಿ 1 ಮತ್ತು 2ರವರಿಗೆ ದಾವಾಸ್ವತನ್ನು ಸಾಗುವಳಿ ಮಾಡಿಕೊಂಡು ಹೋಗಿ ಎಂದು 25 ವರ್ಷಗಳ ಹಿಂದೆ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಬ್ದುಲ್ ಕರಿಂ ಸಾಬ್‌ರುವರೇ ಪ್ರವಾದಿ 1 ಮತ್ತು 2ರವರಿಗೆ ಖಾತೆ ಮತ್ತು ಪಹಣಿ ಮಾಡಬಹುದು ಎಂದು ಹೇಳಿ ಅದರಂತೆ ಪ್ರತಿವಾದಿ 1 ಮತ್ತು 2 ರವರ ಹೆಸಸರಿಗೆ ಖಾತೆ ಮತ್ತು ಪಹಣಿ ಆಗಿದೆ ಎಂದರೆ ಸರಿಯಲ್ಲ.

ಅದರಂತೆ 1998ರಲ್ಲಿ ಪ್ರತಿವಾದಿ 1 ಮತ್ತು 2ರವರು ಮೌಖಿಕವಾಗಿ ವಿಭಾಗಮಾಡಿಕೊಂಡು ತಲಾ 2 ಎಕರೆಯಂತೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅಂದನಿಂದಲೂ ಪ್ರತಿವಾದಿ 1 ಮತ್ತು 2ರವರು ತಲಾ 2 ಎಕರೆಯಂತೆ ಸಾಗುವಳಿ ಮಾಡುತ್ತಿದ್ದು ನನಗೆ ಗೊತ್ತು ಎಂದರೆ ಸರಿಯಲ್ಲ.

4 ಎಕರೆ ಮಜೂರಾಗಿರುವ ಜಮೀನನನ್ನು ಅಳತೆ ಮಾಡಿಸಿಲ್ಲ. ನಾನು ಸಾಗುವಳಿ ಚೀಟಿಯನ್ನು ಕೊಟಿಲ್ಲ ಎಂದರೆಸರಿಯಲ್ಲ. ನಾನು 4 ಎಕರೆ ಜಮೀನಿಗೇ ಸುಳ್ಳು ಚೆಕ್ಕು ಬಂದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 500 ಎಕರೆ ಜಮೀನಿನಲ್ಲಿ 4 ಎಕರೆ ಯಾವ ಭಾಗದಲ್ಲಿ ಮಂಜೂರಾಗಿದೆ ಎಂದರೆ ಸಾಕ್ಷಿ ಉತ್ತರಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. 4 ಎಕರೆಯಲ್ಲಿ 2 ಎಕರೆಯನ್ನು 6ನೇ ಪ್ರತಿವಾದಿಗೆ ಮಾರಿದ್ದಾರೆ. ಆ ಎರಡು ಎಕರೆ ಜಮೀನಿಗೆ ಚೆಕ್ಕು ಬಂದಿ ಎಂದರೆ ಪೂರ್ವಕ್ಕೆ ಬುಡೇನ್ ಸಾಬ್‌ರವರ ಜಮೀನು , ಉತ್ತರಕ್ಕೆ ಇಂತ್ತಿಯಾಸ್ ಖಾನ್ , ಪಶ್ಚಿಮಕ್ಕೆ ಶೇಕ್ ಮೊಯಿದ್ದಿನ್ , ದಕ್ಷಿಣಕ್ಕೆ ಹನುಮಯ್ಯ . ದಾವಾಸ್ವತ್ತನ್ನು ನನ್ನ ತಂದೆಯಾಗಲಿ , ನಾನಾಗಲಿ ಉಳುಮೆ ಮಾಡುತ್ತಿಲ್ಲ ಹಾಗೂ ನನ್ನ ತಂದೆಗೆ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವಂಶವೃಕ್ಷ ಬರೆಸಿಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ.1ರಲ್ಲಿ ನಾನು ಸುಳ್ಳು ವಯಸ್ಸು ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಕಂದಾಯ ಕಟ್ಟಿರುವ ಬಗ್ಗೆ ರಸೀದಿ ಹಾಜರುಪಡಿಸಿಲ್ಲ. 1 ಮತ್ತು 2ನೇ ಪ್ರತಿವಾದಿಗಳು ಸ್ವಾಧೀನದಲ್ಲ್ ಇದ್ದು 2 ಎಕರೆಯನ್ನು 2ನೇ ಪ್ರತಿವಾದಿ 6ನೇ ಪ್ರತಿವಾದಿಗೆ

ಮಾರಾಟ ಮಾಡಿದ್ದು ಉಳಿದ 2 ಎಕರೆಯಲ್ಲಿ 2 ನೇ ಪ್ರತಿವಾದಿಸ್ವಾಧಿನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಏನೂಗೊತ್ತಿಲ್ಲದಿದ್ದೂ ಸಹ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ನನಗಾಗಲಿ ನನ್ನ ತಂದೆಗಾಗಲಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2ರವರು ತಂದೆಯ ಹೆಸರು ಮತ್ತು ನಮ್ಮ ತಂದೆಯ ಹೆಸರು ಒಂದೇ ಆಗಿರುವುದರಿಂದ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಸರಿ ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಗುಬ್ಬಿ